ಚಾಮರಾಜನಗರ ತಾಲ್ಲೂಕು ಚಂದಕವಾಡಿ ಗ್ರಾಮದಲ್ಲಿ ಪದವಿಪೂರ್ವ ಕಾಲೇಜು ತೆರೆಯುವುದು

994 - ಶ್ರೀ ಕೃಷ್ಣಮೂರ್ತಿ ಎ.ಆರ್. (ಸಂತೇಮರಳ್ಳಿ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಾಮರಾಜನಗರ ತಾಲ್ಲೂಕು, ಚಂದಕವಾಡಿ ಗ್ರಾಮ ಪದವಿಪೂರ್ವ ಕಾಲೇಜು ಅತ್ಯವಶ್ಯಕವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಇ) ಚಾಮರಾಜನಗರ ತಾಲ್ಲೂಕಿನ ಸಂತೇಮಾರನಹಳ್ಳಿ ಮತ್ತು ನಂಜನಗೂಡು ತಾಲ್ಲೂಕಿನ ದೊಡ್ಡಕವಲಂದೆ ಗ್ರಾಮಗಳಲ್ಲಿ ವೃತ್ತಿನಿರತ ತರಬೇತಿ ಸಂಸ್ಥೆಯನ್ನು ಸ್ಥಾಪಿಸುವ ಪ್ರಸ್ತಾವನೆಯು ಸರ್ಕಾರದ ಮುಂದೆ ಇದೆಯೇ?

ಈ) ಹಾಗಿಲ್ಲದಿದ್ದಲ್ಲಿ, ಮೇಲ್ಕಂಡ ಗ್ರಾಮಗಳಲ್ಲಿ ವೃತ್ತಿನಿರತ ತರಬೇತಿ ಸಂಸ್ಥೆಗಳನ್ನು ಸ್ಥಾಪಿಸಲು ಸರಕಾರ ಕ್ರಮ ತೆಗೆದುಕೊಳ್ಳುವುದೇ?

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) :

ಅ) ಅಗತ್ಯವಿರುವುದಿಲ್ಲವೆಂದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ) ಚಾಮರಾಜನಗರ ಜಿಲ್ಲೆಯಲ್ಲಿ ಈ ಕೆಳಕಂಡ 12 ಪದವಿಪೂರ್ವ ಕಾಲೇಜುಗಳು ನಡೆಯುತ್ತಿದ್ದು, ಅವುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಈ ಕೆಳಗಿನಂತಿದೆ :

1.	ಸರ್ಕಾರಿ ಬಾಲಕರ ಪಪೂ ಕಾಲೇಜು, ಚಾಮರಾಜನಗರ	104
2.	ಸರ್ಕಾರಿ ಬಾಲಕಿಯರ ಪಪೂ ಕಾಲೇಜು, ಚಾಮರಾಜನಗರ	65
3.	ಸರ್ಕಾರಿ ಪಪೂಶಿ ಕಾಲೇಜು, ಹಾರ್ವೆ, ಚಾಮರಾಜನಗರ ತಾ:	50
4.	ಸರ್ಕಾರಿ ಪಪೂಶಿ ಕಾಲೇಜು, ವೆಂಕಟಯ್ಯನಛತ್ರ, ಚಾಮರಾಜನಗರ	19
5.	ಸರ್ಕಾರಿ ಎಂ. ಸಂಗಶೆಟ್ಟಿ ಪಪೂ ಕಾಲೇಜು, ಕುದೇರು	127
6.	ಜೆಎಸ್ಎಸ್ ಕಲೆ, ವಾಣಿಜ್ಯ, ವಿಜ್ಞಾನ ಕಾಲೇಜು, ಚಾಮರಾಜನಗರ	402
7.	ಜೆಎಸ್ಎಸ್ ಪಪೂ ಕಾಲೇಜು, ರಾಮಪುರ	59
8.	ಬಿ. ಬಸವಲಿಂಗಪ್ಪ ಪಪೂ ಕಾಲೇಜು, ಕೊಳ್ಳೇಗಾಲ, ಚಾಮರಾಜನಗರ	351
9.	ಜೆಎಸ್ಎಸ್ ಬಾಲಿಕಾ ಪಪೂ ಕಾಲೇಜು, ಗುಂಡ್ಲುಪೇಟೆ	50
10.	ಲಯನ್ಸ್ ಸಂ. ಪ.ಪೂ. ಕಾಲೇಜು, ಕೊಳ್ಳೇಗಾಲ	82
11.	ಸೆಂಟ್ ಮೇರಿಸ್ ಪಪೂ ಕಾಲೇಜು, ಮಾರ್ಟಳ್ಳಿ	39
12.	ವಿವೇಕಾನಂದ ಜೆ.ಸಂ.ಪ.ಪೂ. ಕಾಲೇಜು, ಬಿಳಿಗಿರಿರಂಗನಬೆಟ್ಟ ಯಳಂದೂರು ತಾ: ಚಾಮರಾಜನಗರ ಜಿಲ್ಲೆ	20

ಮೇಲಿನ ಕೋಷ್ಟದನ್ವಯ ಕ್ರ.ಸಂ. 1, 5, 6 ಮತ್ತು 8ರ ಕಾಲೇಜುಗಳಲ್ಲಿ ಹೊರತುಪಡಿಸಿ ಉಳಿದ 8 ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ 100ಕ್ಕಿಂತ ಕಡಿಮೆ ಇರುತ್ತದೆ. ಹಾಗೂ ಕ್ರ.ಸಂ. 4 ಮತ್ತು 12ರ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಗಮನೀಯವಾಗಿ ಕಡಿಮೆ ಇರುತ್ತದೆ. ಇದರಿಂದಾಗಿ ಇವುಗಳ ಜೊತೆಗೆ ಮತ್ತೊಂದು ಸರ್ಕಾರಿ ಪದವಿಪೂರ್ವ ಕಾಲೇಜನ್ನು ನೀಡಿದರೆ ಹಾಲಿ ಇರುವ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗಿ ಸರ್ಕಾರದ ಮೇಲೆ ಆರ್ಥಿಕ ಹೊರ ಹೆಚ್ಚಾಗುತ್ತದೆ.

ಇ) ವೃತ್ತಿ ಶಿಕ್ಷಣ ಕೋರ್ಸ್ ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇಲ್ಲ.

ಈ) ಉದ್ಭವಿಸುವುದಿಲ್ಲ.

ಸಂತೇಮಾರಹಳ್ಳಿ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳು

995 - ಶ್ರೀ ಕೃಷ್ಣಮೂರ್ತಿ ಎ.ಆರ್. (ಸಂತೇಮಾರಹಳ್ಳಿ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಂತೇಮಾರಹಳ್ಳಿ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸಂಖ್ಯೆ ಎಷ್ಟು?

ಆ) ಯಾವ ಯಾವ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮೇಲ್ದರ್ಜೆಗೇರಿಸಲಾಗಿದೆ?

ಇ) ಮೇಲ್ದರ್ಜೆಗೇರಿಸಲಾದ ಆಸ್ಪತ್ರೆಗಳು ಎಂದಿನಿಂದ ಕಾರ್ಯಾರಂಭ ಮಾಡಿದೆ?

ಈ) ಪೂರ್ಣ ಪ್ರಮಾಣದಲ್ಲಿ ಈ ಆಸ್ಪತ್ರೆ ಸಿಬ್ಬಂದಿಯನ್ನು ನೇಮಕ ಮಾಡಲಾಗಿದೆಯೇ?

ಉ) ಹಾಗಿಲ್ಲದಿದ್ದಲ್ಲಿ ಕೊರತೆಯಿರುವ ಸಿಬ್ಬಂದಿ ಸಂಖ್ಯೆ ಎಷ್ಟು?

ಊ) ಕೊರತೆಯನ್ನು ನೀಗುವ ಬಗ್ಗೆ ಕ್ರಮ ಕೈಗೊಳ್ಳಲಾಗಿದೆಯೇ?

ಋ) ಸಂತೇಮಾರಹಳ್ಳಿ ಕ್ಷೇತ್ರದ ವ್ಯಾಪ್ತಿಯಲ್ಲಿ ಇರುವ ಆಯುರ್ವೇದ ಆಸ್ಪತ್ರೆಗಳ ಸಂಖ್ಯೆ ಎಷ್ಟು? ಹೊಸದಾಗಿ ಮಂಜೂರು ಮಾಡಿರುವ ಆಯುರ್ವೇದ ಆಸ್ಪತ್ರೆಗಳೆಷ್ಟು? ಮತ್ತು ಯಾವ ಯಾವ ಗ್ರಾಮಗಳಿಗೆ ಮಂಜೂರು ಮಾಡಲಾಗಿದೆ?

ೠ) ಸಂತೇಮಾರಹಳ್ಳಿ ಕ್ಷೇತ್ರದ ವ್ಯಾಪ್ತಿಯಲ್ಲಿನ ಎಲ್ಲಾ ಆಸ್ಪತ್ರೆಗಳಲ್ಲಿಯೂ ಸಿಬ್ಬಂದಿಯನ್ನು ನೇಮಕ ಮಾಡಲಾಗಿದೆಯೇ?

ಎ) ಹಾಗಿಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು?

ಡಾ॥ ಎ.ಬಿ. ಮಾಲಕ ರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) 10.

ಆ) ಯಾವುದೂ ಇಲ್ಲ.